(ಇಂದು ದಿನಾಂಕಃ 21–09–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**1** ಮತ್ತು **3** ನೇ ಪ್ರತಿವಾದಿ ಪರ ಪಾಟೀಸವಾಲು ಃ ಶ್ರೀ ಪಿ ಬಿ ಪಿ ವಕೀಲರಿಂದ ಃ **-**

ದಾವೆಯನ್ನು ನಾನು ಒಬ್ಬನೇ ಸಲ್ಲಿಸಿರುತ್ತೇನೆ. ದಾವೆಯನ್ನು ಪಂಪಸೆಟ್ ಪೈಪಲೈನನ್ನು ಭೂಮಿಯ ಒಳಗಡೆ ಸೇರಿಸಲು ಹೂಡಿರುತ್ತೇನೆ.

ಸರ್ವೆ ಸಂಖ್ಯೆ 101/1+2+3/ಎ 06 ಎಕ್ರೆ 20 ಗುಂಟೆ ಜಮೀನು ನನ್ನ ಮಗನಾದ ಅಮೋಘ ರೆಡ್ಡಿ ರವರಿಗೆ ಸೇರಿರುತ್ತದೆ. ಸರ್ವೆ ಸಂಖ್ಯೆ 108/1 ನನ್ನ ಹೆಸರಿನಲ್ಲಿ ಇರುತ್ತದೆ. ನನ್ನ ಮಗನಿಗೆ ಸೇರಿದ ಮೇಲೆ ಹೇಳಿದ ಸರ್ವೆ ಸಂಖ್ಯೆ 101 ರ ಹೊಲದಲ್ಲಿ ನೀರು ಇಲ್ಲದೇ ಇದ್ದ ಕಾರಣ ನನ್ನ ಹೊಲದಿಂದ ಅಂದರೆ ಸರ್ವೆ ಸಂಖ್ಯೆ 108/1 ರ ಹೊಲದಿಂದ ನೀರಿನ ಪೈಪಲೈನನ್ನು ನನ್ನ ಮಗನ ಹೆಸರಿನಲ್ಲಿ ಇರುವ ಹೊಲಕ್ಕೆ ಅಳವಡಿಸಲು ದಾವೆಯನ್ನು ಸಲ್ಲಿಸಿರುತ್ತೇನೆ.

ದಾವೆಯ ಹಾತ ನಕಾಶೆಯಲ್ಲಿ ತೋರಿಸಿದ ಹಾಗೆ ಒಂದು ಹಳ್ಳ ಹರಿದಿದೆ ಎಂದರೆ ಸಾಕ್ಷಿಯು ಸರಿ ಎಂದು ಹೇಳಿ ಮುಂದುವರೆದು ಸರ್ವೆ ಸಂಖ್ಯೆ 108 ಕ್ಕೆ ಹಳ್ಳ ಹರಿದಿಲ್ಲ ಸರ್ವೆ ಸಂಖ್ಯೆ 107 ಕ್ಕೆ ಮಾತ್ರ ಹಳ್ಳ ಹರಿದಿದೆ ಅಂತಾ ಹೇಳಿ ಪುನಃ 108 ಕ್ಕೆ ಹರಿದಿದೆ ಎಂದು ನುಡಿಯುತ್ತಾರೆ.

ಸರ್ವೆ ಸಂಖ್ಯೆ 108/1 ರ ಪೂರ್ವ ದಿಕ್ಕಿನಲ್ಲಿರುವ ಸರ್ವೆ ಸಂಖ್ಯೆ 107/1 ಅದರ ಪೂರ್ವ ದಿಕ್ಕಿನಲ್ಲಿರುವ 104/1 ನನ್ನ ಹಾಗೂ ಪ್ರತಿವಾದಿಯರ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಸರಿ. ಸರ್ವೆ ಸಂಖ್ಯೆ 104/1 ರ ನಂತರದಲ್ಲಿ 104/2, 104/3 ಹಾಗೂ 104/4 ಬರುತ್ತದೆ ಎಂದರೆ ಸರಿ. ಸದರಿ ಸರ್ವೆ ಸಂಖ್ಯೆಗಳನ್ನು ನನ್ನ ಹಾತನಕಾಶೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಸರ್ವೆ ಸಂಖ್ಯೆ 104/2, 104/3 ಹಾಗೂ 104/4 ನಮ್ಮ ಮತ್ತು ಪ್ರತಿವಾದಿಯರ ಮನೆತನಕ್ಕೆ ಸೇರಿದ ಆಸ್ತಿಗಳು ಅಲ್ಲ ಎಂದರೆ ಸರಿ. ಸದರಿ ಆಸ್ತಿಗಳ ನಂತರದಲ್ಲಿ ನನ್ನ ಮಗನಿಗೆ ಸೇರಿದ ಸರ್ವೆ ಸಂಖ್ಯೆ 101/1+2+3/ಎ ಬರುತ್ತದೆ ಎಂದರೆ ಸರಿ.

ನನ್ನ ಮಗನಿಗೆ ಸೇರಿದ ಹೊಲಕ್ಕೆ ನನ್ನ ಹೊಲದಿಂದ ಪೈಪಲೈನ್‌ನ್ನು ಸದರಿ ಆಸ್ತಿಗಳ ಮೂಲಕವೇ ಹೋಗಬೇಕು ಎಂದರೆ ಸರಿ. ಸರ್ವೆ ಸಂಖ್ಯೆ 104/2, 104/3 ಹಾಗೂ 104/4 ರ ಮಾಲೀಕರನ್ನು ಅಥವಾ ಕಬ್ಜಾದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ನನ್ನ ಮಗನಿಗೆ ಸೇರಿದ ಸರ್ವೆ ಸಂಖ್ಯೆ 101/1+2+3/ಎ ರ ಹೊಲಕ್ಕೆ ನೀರು ಬೇಕಾಗಿದೆ ಎಂದರೆ ಸರಿ.

ಸಾಕ್ಷಿಗೆ ಈಗ ದಿನಾಂಕ 26-04-2022 ರಂದು ಸಲ್ಲಿಸಿದ ಅರ್ಜಿಯನ್ನು ತೋರಿಸಿ ಸಾಕ್ಷಿಯು ಅದು ನಾನು ತಹಶೀಲ್ದಾರ ನವಲಗುಂದ ರವರಿಗೆ ಸಲ್ಲಿಸಿದ ಅರ್ಜಿ ಎಂದು ಒಪ್ಪಿಕೊಂಡಿರುತ್ತಾರೆ ಆದಕಾರಣ ಅದನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಡಿ.1(ಎ) ಎಂದು ಗುರುತಿಸಲಾಯಿತು. ಸದರಿ ನಿಡಿ-1 ಅರ್ಜಿಯನ್ನು ನಾನು ಸರ್ವೆ ಸಂಖ್ಯೆ 101/1+2+3/ಎ ಜಮೀನಿಗೆ ನೀರು ಒದಗಿಸಲು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನನ್ನ ಮಗನ ಅಸಾಧಾರಣ ಅಪ್ರಾಪ್ತ ರಕ್ಷಕ ತಾಯಿ ಎಂದು ತೋರಿಸಿ ನಾನು ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನನ್ನ ಮಗನು ಇನ್ನೂ ಅಪ್ರಾಪ್ತ ನಾಗಿರುತ್ತಾನೆ ಕಾರಣ ಅರ್ಜಿಯನ್ನು ನನ್ನ ಹೆಸರಿನಲ್ಲಿ ನೀಡಿರುತ್ತೇನೆ.

ನಿಪಿ-5 ಆಸ್ತಿಯನ್ನು ನನ್ನ ಮಗನಿಗೆ ನನ್ನ ಹೆಂಡತಿಯನ್ನು ಅಪ್ರಾಪ್ತರಕ್ಷಕ ಆಗಿ ಮಾಡಿ ದಾನ ಮಾಡಿರುತ್ತೇನೆ ಎಂದರೆ ಸರಿ.

ನಿಡಿ-1 ರಲ್ಲಿ ಸರ್ವೆ ಸಂಖ್ಯೆ 104/2 ರಿಂದ 104/4 ರಲ್ಲಿ ಪೈಪಲೈನನ್ನು ಅಳವಡಿಸಲು ಯಾವುದೇ ಕೋರಿಕೆ ಅಥವಾ ಮನವಿ ಇಲ್ಲಾ ಎಂದರೆ ಸರಿ.

ನನ್ನ ವಾದ ಪತ್ರದ 8 ನೇ ಕಂಡಿಕೆಯಲ್ಲಿ ನಾನು ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು ಅಧಿಕಾರಿಗಳು ಅರ್ಜಿಯನ್ನು ಪರಿಗಣಿಸಿ ಅರ್ಜಿಯಲ್ಲಿ ನಮೂದು ಇದ್ದ ಆಸ್ತಿಗಳು ನನ್ನ ಹೆಸರಿನಲ್ಲಿ ಇದ್ದ ಕಾರಣ ಪೈಪಲೈನ್ ಅಳವಡಿಸಲು ಪರವಾನಿಗೆಯ ಅವಶ್ಯಕತೆ ಇರುವುದಿಲ್ಲ ಎಂದು ನಿಪಿ-12 ರ ಪ್ರಕಾರ ಉತ್ತರಿಸಿರುತ್ತಾರೆ ಎಂದರೆ ಸರಿ.

ನಿಪಿ-7 ಮತ್ತು ನಿಪಿ-8 ರಲ್ಲಿ ನನ್ನ ಮತ್ತು ಪ್ರತಿವಾದಿಯರ ಹೆಸರು ಜಂಟಿಯಾಗಿ ಇರುತ್ತದೆ ಎಂದರೆ ಸರಿ. ನಿಪಿ-7 ಮತ್ತು ನಿಪಿ-8 ಜಂಟಿ ಮಾಲೀಕತ್ವ ಮತ್ತು ಕಬ್ಜೆಯ ವಹಿವಾಟಿನಲ್ಲಿ ಇದ್ದು ನಾನು ತಹಶೀಲ್ದಾರ ರವರಿಗೆ ಸುಳ್ಳು ಮಾಹಿತಿಯ ಮೇರೆಗೆ ನಿಡಿ-1 ಅರ್ಜಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಿಡಿ-1 ನೀಡಿದ ನಂತರದಲ್ಲಿ ತಹಶೀಲ್ದಾರ ರವರು ನಿಪಿ-7 ಮತ್ತು ನಿಪಿ-8 ಕ್ಕೆ ಸಂಬಂದ ಪಟ್ಟ ಮಾಲೀಕರಿಗೆ ಸೇರಿ ವಿಚಾರಣೆ ಮಾಡಿಲ್ಲ ಎಂದರೆ ಸರಿ.

ನನ್ನ ವಾದ ಪತ್ರದ 6 ನೇ ಕಂಡಿಕೆಯಲ್ಲಿ ವಿದ್ಯುತ ಪೂರೈಕೆಗೆ ಕೆ.ಇ.ಬಿ., ನವಲಗುಂದ ರವರಿಗೆ ಅರ್ಜಿ ಸಲ್ಲಿಸಿದ್ದ ಬಗ್ಗೆ ಸದರಿ ಅರ್ಜಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ.

ನಿಪಿ-7 ಮತ್ತು ನಿಪಿ-8 ಜಂಟಿಯಾಗಿ ಮಾಲೀಕತ್ವದಲ್ಲಿ ಇದ್ದ ಕಾರಣ ಕೆ.ಇ.ಬಿ. ರವರು ಪ್ರತಿವಾದಿಯವರಿಗೆ ವಿಚಾರಣೆ ಮಾಡಿರುತ್ತಾರೆ ಆದಕಾರಣ ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ.

ನಾನು 1 ರಿಂದ 3 ನೇ ಪ್ರತಿವಾದಿಯರ ನಕಲಿ ಸಹಿಯನ್ನು ನ್ಯಾಯಿತರ ಚಾಪಾ ಕಾಗಾದದ ಮೇಲೆ ಮಾಡಿ ವರದಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ಸದರಿ ವಿಷಯದ ವಿರುದ್ದ 3 ನೇ ಪ್ರತಿವಾದಿಯರು ನನ್ನ ವಿರುದ್ಧ ನವಲಗುಂದ ಠಾಣೆಯಲ್ಲಿ ಅಪರಾಧಿಕ ಪ್ರಕರಣವನ್ನು ಸಲ್ಲಿಸಿರುತ್ತಾನೆ ಎಂದರೆ ಸರಿ. ಸದರಿ ಪ್ರಥಮ ಮಾಹಿತಿಯ ದೃಡಿಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.**2** ಎಂದು ಗುರುತಿಸಲಾಯಿತು. ಅದರ ಅನುಸಾರವಾಗಿ ಪ್ರ.ವ.ವ. ನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರ.ವ.ವ. ನ್ನು ನಿ.ಡಿ.**3** ಎಂದು ಗುರುತಿಸಲಾಯಿತು. ಪ್ರಕರಣದ ತನಿಖೆಯನ್ನು ನಡೆಸಿ ನನ್ನ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನನ್ನ ವಿರುದ್ಧ ಅಪರಾಧಿಕ ಪ್ರಕರಣ ( ಸಿಸಿ 327/2024) ದಾಖಲಾಗಿರುತ್ತದೆ ಅಂದರೆ ಸರಿಯಲ್ಲ.

ಸದರಿ ಪ್ರಕರಣಕ್ಕೆ ಸಂಬಂದ ಪಟ್ಟಂತೆ ನಾನು ಮಾನ್ಯ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಆದೇಶದ ದೃಡಿಕೃತ ಪ್ರತಿಯನ್ನು ನಿ.ಡಿ.**4** ಎಂದು ಗುರುತಿಸಲಾಯಿತು.

ಸರ್ವೆ ಸಂಖ್ಯೆ 101/1+2+3/ಎ ಹಾಗೂ ಸರ್ವೆ ಸಂಖ್ಯೆ 108/1 ಮಳೆ ಆಶ್ರಿತ ಜಮೀನುಗಳು ಅಲ್ಲ ಅದು ನೀರಾವರಿ ಜಮೀನುಗಳು ಎಂದರೆ ಸರಿಯಲ್ಲ. ಸರ್ವೆ ಸಂಖ್ಯೆ 101/1+2+3/ಎ ನೀರಾವರಿ ಜಮೀನು ಆಗಿದ್ದ ಕಾರಣ ಅದಕ್ಕೆ ಮಳೆ ನೀರಿನ ಅವಶ್ಯಕತೆ ಇಲ್ಲಾ ಅಂದರೆ ಸರಿಯಲ್ಲ.

ನಿಪಿ-5 ರ 8 ನೇ ಕಾಲಂನಲ್ಲಿ ನೀರಾವರಿಯ ಮೂಲ ಕಾಲುವೆ ಎಂದು ನಮೂದು ಮಾಡಿದೆ ಎಂದರೆ ಸರಿ. ಸದರಿ ನಿಪಿ-5 ರ ಭಾಗವನ್ನು ನಿ.ಡಿ.**5** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ 8 ನೇ ಕಾಲಂನಲ್ಲಿ ಕಾಲುವೆ ಇದ್ದದನ್ನು ಕಡಿಮೆ ಮಾಡಿ ದುರಸ್ಥಿ ಮಾಡಲು ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನನ್ನ ವಾದ ಪತ್ರದಲ್ಲಿ ನಮೂದು ಇಲ್ಲಾ. ಸದರಿ ಅರ್ಜಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ.

ನಿಪಿ-5 ರ ಜಮೀನಿಗೆ ಕೃಷಿ ಉದ್ದೇಶಕ್ಕಾಗಿ ನೀರಿನ ಅವಶ್ಯಕತೆ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಒಂದೇ ಉದ್ದೇಶದಿಂದ ಸುಳ್ಳು ಮಾಹಿತಿಯ ಮೇರೆಗೆ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ, ಸುಳ್ಳು ದಾವೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ.

ನಿಪಿ-16 ರಲ್ಲಿ ನಿಪಿ-6 ಸರ್ವೆ ಸಂಖ್ಯೆ 108/1 ರಿಂದ ಹರಿಯುವ ಹಳ್ಳದಿಂದ ನೀರು ಎತ್ತಲು ಅನುಮತಿ ನೀಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಆದೇಶವನ್ನು ನಾನು ಮಾನ್ಯ ತಹಶೀಲ್ದಾರ ರವರಿಗೆ ನಿಪಿ-5 ರ 8 ನೇ ಕಾಲಂನಲ್ಲಿ ಕಾಲುವೆಯನ್ನು ಕಡಿಮೆ ಮಾಡಲು ವರ್ಗಾವಣೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-16 ರ ಆದೇಶವನ್ನು ದಿನಾಂಕ 13-12-2022 ರಂದು ನೀರಾವರಿ ನಿಗಮದವರು ರದ್ದುಪಡಿಸಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ನಿ.ಡಿ.**6** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು 02 ಜನರು ಆಕ್ಷೆಪಣೆಯನ್ನು

ಮಾಡಿದ ಕಾರಣ ತಾತ್ಕಲಿಕವಾಗಿ ನಿಪಿ-16 ರ ಆದೇಶವನ್ನು ಸ್ಥಗಿಸಗೊಳಿಸಿರುತ್ತಾರೆ ನಾನು ಅದರ ಬಗ್ಗೆ ಮಾನ್ಯ ನ್ಯಾಯಾಲಯಗಳ ಆದೇಶಗಳನ್ನು ಸಂಬಂದ ಪಟ್ಟ ಅಧಿಕಾರಿಗಳಿಗೆ ನೀಡಿ ಹಿಂಬರವನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಪ್ರತಿಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತಹ ಹಿಂಬರವು ಎಲ್ಲಿಯೂ ಇರುವುದಿಲ್ಲ ಅಂದರೆ ಸರಿಯಲ್ಲ.

ಸದರಿ ನ್ಯಾಯಾಲಯದ ತಡೆಯಾಜ್ಞೆಯ ವಿರುದ್ದ ಪ್ರತಿವಾದಿಯರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನಾನು ಹಾಜರಾಗಿರುತ್ತೇನೆ. ಮೇಲ್ಮನವಿಯನ್ನು ಪುರಸ್ಕರಿಸಿ ಮಾನ್ಯ ನ್ಯಾಯಾಲಯದ ತಡೆ ಆದೇಶವನ್ನು ಖರ್ಚು ಸಮೇತ ರದ್ದುಗೊಳಿಸಲಾಗಿದೆ ಎಂದರೆ ಸರಿ. ಸದರಿ ಮೇಲ್ಮನವಿ ಆದೇಶದ ದೃಡಿಕೃತ ಪ್ರತಿಯನ್ನು ನಿ.ಡಿ.**7** ಎಂದು ಗುರುತಿಸಲಾಯಿತು.

ದಾವೆ ಸಲ್ಲಿಸುವ ಪೂರ್ವದಲ್ಲಿ ಸರ್ವೆ ಸಂಖ್ಯೆ 107/1 ಹಾಗೂ 104/1 ಕ್ಕೆ ಸಂಬಂದ ಪಟ್ಟಂತೆ ತಹಶೀಲ್ದಾರ ರವರಲ್ಲಿ 145 ಸಿ.ಆರ್.ಪಿ.ಸಿ ರಡಿಯಲ್ಲಿ ಪ್ರತಿವಾದಿಯರು ನನ್ನ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮುಟ್ಟುಗೋಳು ಹಾಕಿದ ಗೋಂಜಾಳವನ್ನು ಎಲ್ಲಾ ಪಕ್ಷಗಾರರಿಗೆ ಸಮಾನವಾಗಿ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿ.

ಸದರಿ ಪ್ರಕರಣದ ದ್ವೇಷದಿಂದ ನಾನು ಪ್ರತಿವಾದಿಯರ ವಿರುದ್ಧ ಸಕಾರಣವಿಲ್ಲದೇ ದೂರುದ್ದೇಶದಿಂದ ಪ್ರಕರಣವನ್ನು ಮತ್ತು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ನನ್ನ ಮಗನ ಅಪ್ರಾಪ್ತ ರಕ್ಷಕರು ನನಗೆ ಯಾವುದೇ ಮೌಕ್ತಿಯಾರನ್ನು ನೀಡಿಲ್ಲ. ಸಾಕ್ಷಿಯು ಮುಂದುವರೆದು ಅವರು ನನ್ನ ಹೆಂಡತಿ ಮತ್ತು ಮಗ ಇರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಜಂಟಿ ಮಾಲೀಕತ್ವದಲ್ಲಿ ಮತ್ತು ಜಂಟಿ ಕಬ್ಜಾ ವಹಿವಾಟಿನಲ್ಲಿ ಇದ್ದು ಅದರಲ್ಲಿ ಪ್ರತಿವಾದಿಯರು ಬೆಳೆಯನ್ನು ಬೆಳೆದಿದ್ದು ಅದನ್ನು ನಾಶ ಮಾಡಲು ನಾನು ಸುಳ್ಳು ಮಾಹಿತಿಯ ಮೇರೆಗೆ ದಾವೆಯನ್ನು ಸಲ್ಲಿಸಿ ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸದರಿ ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ.

ಸಾಕ್ಷಿಗೆ ತನ್ನ ಮತ್ತು ಪ್ರತಿವಾದಿಯರ ನಡುವೆ ನಡೆದ ಸಿಆರಪಿಸಿ ಕಲಂ 145 ರಡಿಯಲ್ಲಿ ಪ್ರಕರಣದ ಆದೇಶದ ಪ್ರತಿಯನ್ನು ಒಪ್ಪಿಕೊಂಡಿದ್ದು ಸದರಿ ಆದೇಶದ ಪ್ರತಿಯನ್ನು ನಿ.ಡಿ.**8** ಎಂದು ಗುರುತಿಸಲಾಯಿತು. ಸದರಿ ಆದೇಶದ ವಿರುದ್ದ ನಾನು ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯ

ಆದೇಶದ ದೃಡಿಕೃತ ಪ್ರತಿಯನ್ನು ನಿ.ಡಿ.**9** ಎಂದು ಗುರುತಿಸಲಾಯಿತು. ಸದರಿ ಆದೇಶದ ಪ್ರಕಾರ ತಹಶೀಲ್ದಾರ ರವರ ಆದೇಶವನ್ನು ಎತ್ತಿ ಹಿಡಿಯಲಾಗಿತ್ತು ಎಂದರೆ ಸರಿ.

ಪ್ರತಿವಾದಿಯರು ನನ್ನ ವಿರುದ್ದ ಸಲ್ಲಿಸಿದ ಅಸಲು ದಾವಾ ಸಂಖ್ಯೆ 425/2015 ರ ವಿರುದ್ದ 2 ನೇ ಪ್ರತಿವಾದಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಆದ ತಾತ್ಕಲಿಕ ಆದೇಶದ ದೃಡಿಕೃತ ಪ್ರತಿಯನ್ನು ನಿ.ಡಿ.**10** ಎಂದು ಗುರುತಿಸಲಾಯಿತು. ಸದರಿ ಮೇಲ್ಮನವಿಯಲ್ಲಿ ನಾನು ಹಾಜರು ಆಗಿರುತ್ತೇನೆ.

ಸಾಕ್ಷಿಗೆ ಈಗ ಮಾನ್ಯ ಉಚ್ಚ ನ್ಯಾಯಾಲಯದ ಮೇಲ್ಮನವಿಯ ನೋಟಿಸ ಪ್ರತಿಯನ್ನು ತೋರಿಸಿ ಸಾಕ್ಷಿಯು ಅದನ್ನು ಓಪ್ಪಿಕೊಂಡಿದ್ದು ಸದರಿ ನೋಟಿಸಿನ ಪ್ರತಿಯನುನ ನಿ.ಡಿ.**11** ಎಂದು ಗುರುತಿಸಲಾಯಿತು.

<u>ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ**,** ಸಮಯವಕಾಶ ನೀಡಲಾಯಿತು**.**</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**